JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ವಂಶಾವಳಿ

**ಡಾ. ಚೈತನಾ ಸಂಕೊಂಡ**
**ಅತಿಥಿ ಉಪನ್ಯಾಸಕರು**
**ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ**

ಕನ್ನಡ ದಾಖಲು ಸಾಹಿತ್ಯದಲ್ಲಿ ಅಪರೂಪವಾಗಿ ದಾಖಲಾದ ವಂಶಾವಳಿ ಪ್ರಕಾರವು ಕನ್ನಡ ಸಾಂಸ್ಕೃತಿಕ ಚರಿತ್ರೆಯಲ್ಲಿ ಭವ್ಯವಾದ ಸ್ಥಾನ ಪಡೆದಿದೆ. ಈ ದಾಖಲು ಸಾಹಿತ್ಯದ ಪ್ರಕಾರ ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಕಂಡುಬಂದರೂ ಇದರ ಸುಳಿವು ಮತ್ತು ಹೊಳಹು ಪ್ರಾಚೀನ ಕಾವ್ಯಗಳಲ್ಲೇ ಗಮನೀಸಬಹುದು. ಪಂಪನು ಕನ್ನಡದ ಆದಿಕವಿ. ಆತ ಬರೆದ ಎರಡು ಕೃತಿಗಳು ಒಂದು ಆಗಮಿಕ, ಮತ್ತೊಂದು ಲೌಕಿಕ. ಈ ಎರಡೂ ಕಾವ್ಯಗಳನ್ನು ಪರಿಶೀಲಿಸಿದರೇ ಅಥವಾ ಅವಲೋಕಿಸಿದರೇ ವಂಶಾವಳಿಯ ಕುರಿತ ಮಾಹಿತಿಗಳು ನಮಗೆ ಲಭ್ಯವಾಗುತ್ತವೆ. ಆಗಮಿಕ ಕೃತಿಯಾದ ಆದಿಪುರಾಣದಲ್ಲಿ ಋಷಭನಾಥನ ಜನ್ಮಜನ್ಮಾಂತರದ ಭವಾವಳಿಯ ಪ್ರಸಂಗಗಳನ್ನು ಹೇಳುವಾಗ ವಂಶಾವಳಿಯ ಕುರಿತಾದ ಮಾಹಿತಿಗಳನ್ನು ಕೊಡುವಂತೆ ಕಂಡುಬರುತ್ತದೆ. ಇದನ್ನು ಭವಾವಳಿ ಎನ್ನುವ ಅರ್ಥದಲ್ಲಿ ಸಂಗ್ರಹಿಸಿರುವುದು ವಿಶೇಷ. ಆದರೆ ಪಂಪಭಾರತ ಅಥವಾ ವಿಕ್ರಮಾರ್ಜುನ ವಿಜಯದಲ್ಲಿ ತನ್ನ ಆಶ್ರಯದಾತನಾದ ಅರಿಕೇಸರಿಯ ವಂಶವಳಿಯನ್ನೇ ಆರಂಭದಲ್ಲಿ ಉಲ್ಲೇಖಿಸಿ ಕಾವ್ಯಕ್ಕೊಂದು ಚಾರಿತ್ರಿಕ ದಾಖಲೆಯನ್ನು ಮೂಡಿಸುವಲ್ಲಿ ಪ್ರಯತ್ನಿಸಿದ್ದಾನೆ. ಹಾಗೇ ನೋಡಿದರೆ ಅರಿಕೇಸರಿಯೂ ಕನ್ನಡ ನಾಡಿನ ವಂಶಾವಳಿ ಸಾಹಿತ್ಯಕ್ಕೆ ಮೂಲ ಎಂದೆನಿಸುತ್ತದೆ. ಆತನ ಚರಿತ್ರೆಯನ್ನು ದಾಖಲಿಸಿದ ಪಂಪ ವಂಶಾವಳಿಯ ರಚನೆಯ ಮೂಲ ಪುರುಷನೆಂದೆ ಹೇಳಬೇಕು. ಈ ಹಿನ್ನಲೆಯಲ್ಲಿ ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ವಂಶಾವಳಿ ಸಾಹಿತ್ಯವೂ ಪಂಪನ ಕಾವ್ಯದ ಪ್ರೇರಣೆ ಪ್ರಭಾವಕ್ಕೊಳಗಾಗಿ ರಚಿಸಿದ್ದಾರೆಂದು ಹೇಳಬಹುದು. ಈ ಪರಂಪರೆಯನ್ನು ಮುಂದುವರೆಸಿದ ಕನ್ನಡದ ಶಕ್ತಿಕವಿ ರನ್ನ ತನ್ನ ಎರಡೂ ಕೃತಿಗಳಲ್ಲೂ ವಂಶಾವಳಿಯ ವಿವರಗಳನ್ನು ನೀಡಿರುವುದು ಗಮನಿಸಬಹುದು. ಎರಡನೆಯ ತೀರ್ಥಂಕರನಾದ ಅಜಿತನಾಥ ತೀರ್ಥಂಕರನ ಕಥೆಯನ್ನು ಹೇಳಲು ಹೊರಟರೂ ಅದೊಂದು ಆಗಮಿಕ ಕಾವ್ಯ ಎನ್ನುವ ಮನೋಧರ್ಮ ಬದಿಗಿಟ್ಟು ದಾನ ಚಿಂತಾಮಣಿ ಅತ್ತಿಮಬ್ಬೆಯ ಗುಣಗಾನವನ್ನು ಮಾಡುತ್ತ ಆಕೆಯ ವಂಶಾವಳಿ ಸಾಹಿತ್ಯಕ್ಕೆ ಪ್ರೇರಣೆ ನೀಡಿತೆಂದೆ ಹೇಳಬೇಕು. ಆತನ ಇನ್ನೊಂದು ಕಾವ್ಯವಾದ ಗದಾಯುದ್ಧ ಅಥವಾ ಸಾಹಸ ಭೀಮವಿಜಯವೂ ಆಶ್ರಯದಾತನ ಕಾವ್ಯವಾದರೂ ಆತನಿಗೆ ಆಶ್ರಯ ಕೊಟ್ಟ ಇರವೆಬೆಡಂಗ ಮತ್ತು ಸತ್ಯಾಶ್ರಯರ ಪೂರ್ವಪರವಾದ ವಂಶಾವಳಿಯ ಮಾಹಿತಿ ದಾಖಲಿಸಿರುವುದು ಅವರ ಚಾರಿತ್ರಿಕ ಪ್ರಜ್ಞೆಯನ್ನು ಹಾಗೂ ತನ್ನ ಆಶ್ರಯದಾತನಾದ ರಾಜನ ವಂಶಾವಳಿಯನ್ನು ಅಜರಾಮರಗೊಳಿಸುವ ನಿರ್ಧಾರವಾಗಿದೆ ಎಂದೆ ಹೇಳಬೇಕು. ಈ ಹಿನ್ನಲೆಯನ್ನು ಗಮನಿಸಿ ವಂಶಾವಳಿ ಸಾಹಿತ್ಯದ ಕುರಿತಾಗಿ ಡಾ.ಕೆ.ರವೀಂದ್ರನಾಥರವರು ಹೀಗೆ ಅಭಿಪ್ರಾಯ ಪಡುತ್ತಾರೆ.

"ಕನ್ನಡ ದಾಖಲು ಸಾಹಿತ್ಯಕ್ಕೆ ಸೇರುವ ಮತ್ತೊಂದು ಪ್ರಕಾರ ವಂಶಾವಳಿಗಳು. ಕನ್ನಡದಲ್ಲಿ ತಿರುಮಲಾರ್ಯನ ಚಿಕ್ಕದೇವರಾಜ ವಂಶಾವಳಿ; ಬುಕ್ಕರಾಯ ಚರಿತೆ ಹೆಸರಿನ ಹಂಡೆಪಾಳೇಗಾರರ ವಂಶಾವಳಿ ಕೃತಿಗಳನ್ನು ಬಿಟ್ಟರೆ ಉಳಿದಂತೆ ಹೆಬ್ಬಾಳ ಮನೆತನದ ವಂಶಾವಳಿಯಂಥ ಕಾಗದ ಪ್ರತಿಯಲ್ಲಿಯ ಸಾವಿರಾರು ವಂಶಾವಳಿಗಳು ದೊರೆಯುತ್ತವೆ. ಐತಿಹಾಸಿಕ ಸಂಗತಿಗಳನ್ನು ನಿರೂಪಿಸುವ ವಂಶಾವಳಿಗಳು ಅಧ್ಯಯನ ಯೋಗ್ಯ ದಾಖಲೆಗಳಾಗಿವೆ."

ಈ ಮೇಲಿನ ಅಂಶವನ್ನು ಗಮನಿಸುವುದಾದರೆ ವಂಶಾವಳಿ ಸಾಹಿತ್ಯವೂ ದಾಖಲು ಸಾಹಿತ್ಯವೆಂದೇ ಗುರುತಿಸುವುದು ಯೋಗ್ಯವೆನಿಸುತ್ತದೆ. ಇದೊಂದು ಕಾವ್ಯ ರೂಪವಾಗಿ ಗುರುತಿಸುವುದು ಸಮಂಜಸವಲ್ಲ. ಏಕೆಂದರೆ ಕಾವ್ಯವು ತನ್ನದೇ ಆದ ವೈಲಕ್ಷಣಗಳನ್ನು ಒಳಗೊಂಡಿರುತ್ತದೆ. ಆದರೆ ದಾಖಲು ಸಾಹಿತ್ಯದಲ್ಲಿ ನಿರ್ದಿಷ್ಟವಾದ ಕಾಲ, ಕಾರ್ಯ, ದೇಶ ಮತ್ತು ಚಾರಿತ್ರಿಕ ಅಂಶಗಳನ್ನು ಒಳಗೊಂಡಿರುತ್ತದೆ. ಈ ಹಿನ್ನಲೆಯಲ್ಲಿ ವಂಶಾವಳಿ ಎನ್ನುವ ಪದಕ್ಕೆ ನೀಡುವ ಅರ್ಥ ಈ ಕೆಳಗಿನಂತಿದೆ.

**"** 'ವಂಶಾವಳಿ**'** ಎಂದರೆ ಕುಲ, ಸಂತತಿ, ಪೀಳಿಗೆ ಸಂತಾನ, ವಂಶಾನುಕ್ರಮ ಎಂಬಿತ್ಯಾದಿ ಅರ್ಥವನ್ನು ಹೊಂದಿವೆ. **'**ವಂಶ**'**, **'**ವಂಶಜ**'** ಎಂಬ ಪದಕ್ಕೆ **'**ವಳಿ**'** ಎಂಬ ಆಖ್ಯಾತ ಪ್ರತ್ಯಯ ಸೇರಿಕೊಂಡು **'**ವಂಶಾವಳಿ**'** ಎಂಬ ಸಮಸ್ತ ಪದವಾಗಿದೆ (ವಂಶ = ಪೀಳಿಗೆ, ವಳಿ = ಸಾಲು, ತಲೆಮಾರು ಎಂದರ್ಥ) ಒಂದು ಸಂತತಿಯ ಮೂಲಪುರುಷನಿಂದ ಆರಂಭಿಸಿ, ಆತನ ತಂದೆ–ತಾಯಿ, ಹೆಂಡತಿ–ಮಕ್ಕಳು, ಬಂಧು–ಬಳಗ, ಗುರು–ಸಾಧನೆ ಮತ್ತು ವ್ಯಕ್ತಿತ್ವವನ್ನು ವಿವರವಾಗಿ ಬಣ್ಣಿಸಿವುದಕ್ಕೆ ವಂಶಾವಳಿಯೆನ್ನುತ್ತಾರೆ**"**.

ಮೇಲಿನ ಹೇಳಿಕೆಯಲ್ಲಿ ವಂಶಾವಳಿಗೆ ನಿರ್ದಿಷ್ಟವಾದ ಕಾಲ, ಪ್ರದೇಶ, ವ್ಯಕ್ತಿ, ಕಾರ್ಯ ಮೊದಲಾದ ಅಂಶಗಳು ಮಹತ್ವವಾಗಿ ಕಾಣುತ್ತವೆ. ಇಲ್ಲಿ ಊಹೆ ಅಥವಾ ಉತ್ಪ್ರೇಕ್ಷಗಳಿಗೆ ಅವಕಾಶವಿಲ್ಲ. ಈ ಹಿನ್ನಲೆಯಲ್ಲಿ ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಗುರುತಿಸಿಕೊಂಡ ವಂಶಾವಳಿ ಸಾಹಿತ್ಯವು ಹಲವು ಮನೆತನಗಳ, ಹಲವು ರಾಜರ, ಹಲವು ವ್ಯಕ್ತಿಗಳ, ಹಲವು ಘಟನೆಗಳ, ದಾಖಲೆಗಳನ್ನು ದಾಖಲಿಸಿರುವುದು ಈ ದಾಖಲು ಸಾಹಿತ್ಯದ ಮಹತ್ವವೆಂದೆ ಹೇಳಬಹುದು.

ಈ ವಂಶಾವಳಿ ಸಾಹಿತ್ಯವನ್ನು ವಿದ್ವಾಂಸರು ಎರಡು ರೀತಿಯಲ್ಲಿ ಗುರುತಿಸಿದ್ದಾರೆ. ಒಂದು ಘಟನಾವಳಿ ದಾಖಲೆ, ಇನ್ನೊಂದು ವ್ಯಕ್ತಿ ಪ್ರಧಾನ ವಂಶಾವಳಿ ದಾಖಲೆ ಎಂದು ಗುರುತಿಸಿದ್ದಾರೆ. ಇವುಗಳನ್ನು ಈ ಕೆಳಗಿನಂತೆ ವಿವರಿಸಬಹುದು.

*** ಘಟನಾ ಪ್ರದಾನ ವಂಶಾವಳಿ ದಾಖಲೆಗಳು**

**"**ಎಸೆವಂ ಸಾಸಿರ ಬಾಡದೊಳ್ ನೆಗಳ್ದ ಜಂಬೂಗ್ರಾಮದೊಳ್
ಸಾಮವೇದ ಸುರೇಜ್ಯಂ ಮಧುಸೂದನಂ ಹರಿತಗೋತ್ರೋತ್ತಂಸನಾತಂಗೆ
ತಾನೆಸೆವಳ್ ಜಕ್ಕಲದೇವಿಯೆಂಬ ವಧುವಾಗೀಶಂಗೆ ವಾಗ್ದೇವಿಯಂತೆ
ಸುಪುತ್ರಃ ಕುಲದೀಪಕಃ ಎನಿಸಿದಂ ತಂನ ನಂದನಂ ಭಾಸ್ಕರಂ ।
ಸರಸೀ ಜಾಕರದಂತೆ ಮೇಲ್ ಮಲರ್ವ ಕರ್ಣ್ನಾಟಾನ್ವಯಕ್ಕೆಯ್ದೆ
ಭಾಸ್ಕರನಾದಂಗಡ ಭಾಸ್ಕರಂ ಪ್ರಭೆಯವೋಲಾತಂಗೆ ಮಾಳವ್ವೆ ಭಾಸುರ
ಶೀಲಾಂನ್ವಿತೆ ಪತ್ನಿಯಾದಳವರ್ಗಾದಂ ನಂದನಂ ದಾನ ಭಾಸ್ಕರ ಪುತ್ರಂ
ನೃಪಸಂಧಿ ವಿಗ್ರಹಿಲಲಾಮಂ ಕೇಶಿರಾಜಾಹ್ವಯಂ ॥**"**

ಈ ಮೇಲಿನ ಶಾಸನೋಕ್ತ ವಂಶಾವಳಿಯಲ್ಲಿ ಮಧುಸೂಧನ ಪತ್ನಿ ಜಕ್ಕಲದೇವಿ, ಅವರ ಮಗ ಭಾಸ್ಕರ ಆತನ ಹೆಂಡತಿ ಮಾಳವ್ವೆ ಇವರಿಗೆ ಜನಸಿದಾತ ಕೇಶಿರಾಜ, ಈತ ಸಂದಿವಿಗ್ರಹಿ. ಈತನ ಪತ್ನಿ ಮಹಾದೇವಿ. ಇವರಿಗೆ ಕಾಮರಸ, ಬಾಚರಸ, ಮಧುವಣ್ಣ, ಸಂಕಣ್ಣವೆಂಬ ಮಕ್ಕಳಿದ್ದರು. ಇವರಲ್ಲಿ ಸಂಕಣ್ಣ ಚನ್ನಕೇಶವ ದೇವಾಲಯವನ್ನು ಕಟ್ಟಿಸಿ ಅದರ ಪ್ರತಿಷ್ಠಾಪನೆಯನ್ನು ಮಾಡಿಸುತ್ತಾನೆ. ಅದರನ್ವಯ ಈತನ ವಂಶಾವಳಿಯ ವಿವರವನ್ನು ಶಾಸನದಲ್ಲಿ ದಾಖಲಿಸಲಾಗಿದೆ.

ಈ ಮೇಲಿನ ಶಾಸನದ ದಾಖಲೆಯು ಚೆನ್ನಕೇಶವ ದೇವಾಲಯ ನಿರ್ಮಾಣದ ಮುಖ್ಯ ಅಂಶವಾಗಿದ್ದರೂ ಕೂಡಾ ಆ ದೇವಾಲಯವನ್ನು ಕಟ್ಟಿಸಿದ ಸಂಕಣ್ಣನ ವಂಶಾವಳಿಯ ವಿವರಣೆ ನೀಡುವುದು ಈ ಶಾಸನದ ಮಹತ್ವವೆನಿಸುತ್ತದೆ. ಇದೊಂದು ಅಪರೂಪವಾದ ದಾಖಲೆ ಎಂದೇ ಹೇಳಬಹುದು.

*** ವ್ಯಕ್ತಿಪ್ರದಾನ ವಂಶಾವಳಿ ದಾಖಲೆಗಳು**

ವೀರಗಲ್ಲುಗಳು ವ್ಯಕ್ತಿಯ ಸಾಮರ್ಥ್ಯ ಮತ್ತು ವೀರತ್ವದ ಸಂಕೇತವಾಗಿವೆ. ವ್ಯಕ್ತಿಯ ಸಾಹಸಮಯವಾದ ಪ್ರಕೃತಿಯನ್ನು ವೀರಗಲ್ಲುಗಳು ಒಳಗೊಂಡಿವೆ. ಈ ನಿಮಿತ್ತ ಹಲವಾರು ಪ್ರಸಂಗಗಳಲ್ಲಿ ವೀರತ್ವವನ್ನು ಹೊಂದಿ ಮಡಿದ ವ್ಯಕ್ತಿಯ ವಂಶಾವಳಿಯನ್ನು ಈ ವೀರಗಲ್ಲಿನಲ್ಲಿ ದಾಖಲಿಸಿರುವುದು ಕಾಣುತ್ತೇವೆ. ಉದಾಹರಣೆಗೆ

"ಹಲರಕೊಂದು ಸ್ವರ್ಗಸ್ಥನಾದ ದೇವನ ತಮ್ಮ ಜಕ್ಕಬೋವನು
ಬುಗುಡಲ ನಾಲಕ್ಕನ ಮಗ ಮಾರಮಸಣನುಂ ಪರೋಕ್ಷ
ವಿನಯವಾಗಿ ನಿಲ್ಲಿಸಿದ ಬೀರಗಲು"

ಅದೇ ರೀತಿ ವ್ಯಕ್ತಿಪ್ರಧಾನ ವಂಶಾವಳಿಯನ್ನು ನಿರೂಪಿಸುವಲ್ಲಿ ಬಸವಣ್ಣನವರ ಕುರಿತಾದ ಅರ್ಜುನವಾಡ ಶಾಸನವು ಮಹತ್ವದೆನಿಸುತ್ತದೆ.

"ನಮಸ್ತುಂಗ ಸಿರಶ್ಚುಂಬಿ
ಚಂದ್ರಚಾಮರ ಚಾರವೇ
ತ್ರೈಲೋಕ್ಯ ನಗರಾರಂಭ ಮೂಲ ಸಂಬಾಯ
ಶಂಭವೇ ಶ್ರೀಯಂ ಶ್ರೀ ಮಲ್ಲಿನಾಥಂ"

ಸಂಗನ ಬಸವನ ಅ_ _ _ _
ಲಿಗೈಕ್ಯ ದೇವರಾಜ ಮುನಿಪನತನಯಂ
ಜಂಗಮ ಪುರುಷಂ ಕಾವರ
ಸಂಗಂ ಪ್ರಿಯಸುತನನೆ ಪ್ವಕಲಿದೇವರಸಂ

ಕಲಿದೇವ ಮುನಿಪ ನಾತ್ಮಜ
ಸೆಲೆ ಮುಜಗದೊಳಗೆ ಮೆರೆದ ಮಾನವದೇವಂ
ಗೆಲಿದಂ ಆಶನ ಜೆಸನವ
ಛಲರಧಿಕಂ ಹಾಲಬಸವ ದೇವನ ಮುನಿಪಂ"

ಬಸವಣ್ಣನ ಕುರಿತ ಅರ್ಜುನವಾಡ ಶಾಸನವು ಉತ್ತಮವಾದ ನಿದರ್ಶನವೆಂದೆ ಹೇಳಬೇಕು. ಆದರೆ ವೀರಶೈವ ಕವಿಗಳಿಗೆ ಇತಿಹಾಸ ಅಂಶಗಳನ್ನು ಅಥವಾ ವ್ಯಕ್ತಿಯ ಚಾರಿತ್ರಿಕ ಘಟನೆಗಳನ್ನು ದಾಖಲಿಸಬೇಕೆಂಬ ಉದ್ದೇಶ ಇದ್ದುದು ಅವರ ಸಾಹಿತ್ಯ ರಚನೆಯಲ್ಲಿ ಕಾಣುತ್ತೇವೆ. ಹರಿಹರ ಕವಿಯು ಬಸವರಾಜ ದೇವರ ರಗಳೆಯನ್ನು ಬರೆಯುವ ಮೂಲಕ, ರಾಘವಾಂಕನು ಹರಿಹರ ಮಹತ್ವ ಬರೆಯುವ ಮೂಲಕ, ಸಿದ್ಧನಂಜೇಶನು ರಾಘವಾಂಕ ಚಾರಿತ್ರ್ಯ ಬರೆಯುವ ಮೂಲಕ ಕನ್ನಡ ಸಾಹಿತ್ಯಕ್ಕೊಂದು ಚಾರಿತ್ರಿಕ ಕಾವ್ಯ ಬರೆಯುವ ಪರಂಪರೆಯನ್ನು ಮೂಡಿಸಿದರು. ಆದರೆ ಅದು ಶುದ್ಧ ಚಾರಿತ್ರಿಕ ಕಾವ್ಯವಾಗದೇ ಪವಾಡ, ಅತಿಶಯೋಕ್ತಿ ಆತ್ಮಾಭಿಮಾನದ ಹೊಗಳಿಕೆಯ ಮೂಲಕ ಚರಿತ್ರೆ ಹಿಂದೆ ಸರಿದದ್ದು ಕಾಣುತ್ತೇವೆ. ಈ ಅಂಶವನ್ನು ಉಲ್ಲೇಖಿಸಿ ಕನ್ನಡದ ಪ್ರಸಿದ್ಧ ಸಂಶೋಧಕರಾದ ಡಾ.ಎಂ.ಎಂ.ಕಲಬುರ್ಗಿಯವರು "ವೀರಶೈವ ಕವಿಗಳಿಗೆ ಚಾರಿತ್ರಿಕ ಪ್ರಜ್ಞೆ ಇತ್ತು. ಆದರೆ ಅತಿಯಾದ ವೈಭವಿಕರಣ ಪವಾಡ ಕಥೆಗಳ ಮೂಲಕ ಚಾರಿತ್ರಿಕ ಅಂಶಗಳು ಗೌಣವಾಗಿ ಅರ್ಧ ಹಾಲು ಅರ್ಧ ನೀರು" ಎನ್ನುವ ಹೇಳಿಕೆಯನ್ನು ಇಲ್ಲಿ ಗಮನಿಸಬಹುದು.

ಒಂದು ದೃಷ್ಟಿಯಿಂದ ಕಾವ್ಯ ಸಾಹಿತ್ಯಕ್ಕೂ ಮತ್ತು ವಂಶಾವಳಿ ಸಾಹಿತ್ಯಕ್ಕೂ ವೈಷಮ್ಯವಿರುವುದು ಕಾಣುತ್ತೇವೆ. ಸಾಹಿತ್ಯಿಕ ಕೃತಿಯಲ್ಲಿ ಅಷ್ಟಾದಶ ವರ್ಣನೆ, ಉತ್ಪ್ರೇಕ್ಷೆ, ಅತಿಶಯೋಕ್ತಿ, ಕವಿಸಮಯ, ಕವಿಯ ಪ್ರತಿಭೆಗೆ ತಕ್ಕಂತೆ ಕಾವ್ಯರಚನೆಯ ಜಾಣ್ಮೆ ಕಾಣುತ್ತೇವೆ. ಆದರೆ ವಂಶಾವಳಿ ಸಾಹಿತ್ಯ ಕೃತಿಯಲ್ಲಿ ಈ ಮೇಲಿನ ಎಲ್ಲಾ ಅಂಶಗಳಿಗೆ ಅವಕಾಶವಿಲ್ಲ. ತನ್ನದೇ ಆದ ಪಾರಿಭಾಷಿಕ ಪದಗಳನ್ನೊಳಗೊಂಡು ದಾಖಲೆಯಾದ ಈ ವಂಶಾವಳಿ ಸಾಹಿತ್ಯ ನಿಜಕ್ಕೂ ದಾಖಲು ಸಾಹಿತ್ಯವೇ. ಈ ಪ್ರಕಾರವು ದಾಖಲು ಸಾಹಿತ್ಯವೆಂದೇ ಗುರುತಿಸಿದ ಡಾ.ಕೆ.ರವೀಂದ್ರನಾಥರವರ ವಿಚಾರ ಔಚಿತ್ಯಪೂರ್ಣ. ಅಲ್ಲದೇ ವಂಶಾವಳಿ ಸಾಹಿತ್ಯದ ಹಲವಾರು ಮಾದರಿಯ ದಾಖಲೆಗಳನ್ನು ಉದಾಹರಣೆ ಸಹಿತ ನೀಡಿ ಓದುಗರ ಅಥವಾ ಈ ಕ್ಷೇತ್ರದಲ್ಲಿ ಸಂಶೋಧನೆ ಕೈಗೊಳ್ಳುವ ಸಂಶೋಧಕರಿಗೆ ಉಪಯುಕ್ತ ಮಾಹಿತಿಯನ್ನು ನೀಡಿದ್ದಾರೆಂದರೆ ತಪ್ಪಾಗಲಾರದು. ಈ ಲೇಖನವನ್ನು ಸಿದ್ಧಪಡಿಸಲು ಡಾ.ರವೀಂದ್ರನಾಥರವರು ದಾಖಲು ಸಾಹಿತ್ಯದ ಶಿರ್ಷಿಕೆ ಅಡಿಯಲ್ಲಿ ವಂಶಾವಳಿ ಸಾಹಿತ್ಯದ ಅಂಶಗಳನ್ನು ಪರಿಗಣಿಸಿ ಸಿದ್ಧಪಡಿಸಲಾಗಿದೆ. ಅವರಿಗೆ ತುಂಬು ಹೃದಯದ ವಂದನೆಗಳು.

**ಪರಾಮರ್ಶನ ಗ್ರಂಥಗಳು**


1. ಕನ್ನಡ ದಾಖಲು ಸಾಹಿತ್ಯ – ಡಾ.ಕೆ.ರವೀಂದ್ರನಾಥ
2. ಮಾರ್ಗ ಸಂಪುಟ 1. 2. 3. – ಡಾ.ಎಂ.ಎಂ.ಕಲಬುರ್ಗಿ
3. ಚಂಪೂ ಕವಿಗಳು – ಪಿ.ವಿ.ನಾರಾಯಣ
4. ವಚನ ಸಾಹಿತ್ಯ – ಡಾ. ಎಂ.ಚಿದಾಂದಮೂರ್ತಿ
5. ಶಾಸ್ತ್ರೀಯ 1. 2. – ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ
6. ಚಿಕ್ಕದೇವರಾಯ ವಂಶಾವಳಿ – ಸಂ.ಮಂ॥ ಆ॥ ರಾಮಾನುಜಯ್ಯಂಗಾರ್ಯ